ಕವಿತೆ



## ಸುಬ್ರಾಯ ಚೊಕ್ಕಾಡಿ

ಕಲೆ: ಸಂತೋಷ್ ಸಸಿಹಿತ್ಲು

# ಸರದಿ

ಹಸುರಿನ ಬಾಲ್ಯ ಯೌವನ ಕಳೆದು
ಹೂವು,ಹಣ್ಣು ,ಬೀಜಗಳಿಗವಕಾಶವಾಗಿ
ಈಗ ,ಬದುಕಿನ ಬಣ್ಣ ಕಳಕೊಂಡು
ಇಳಿ ಸಂಜೆಗೆದುರಾಗಿ,ಹಣ್ಣಾಗಿ,
ಆಶ್ರಯ ನೀಡಿದ ಮರಕ್ಕೆ ವಿದಾಯ ಹೇಳುವ ಹಾಗೆ
ಅಂಟಿದ ನಂಟಿನ
ಭವ ಬಂಧನದಿಂದ ಕಳಚಿಕೊಳ್ಳುವ ಹಾಗೆ
ಉದುರಿದ ಎಲೆ
ಗಾಳಿಯಲಿ ತೇಲಿ ಹಗುರಾಗಿ
ನಿಧಾನ ನೆಲದೊಡಲ ಸೇರಿ,
ಮಣ್ಣಿನಲಿ ಮಣ್ಣಾಯಿತು.

ಮಣ್ಣಂತರಾಳದಲಿ ಹರಡಿದ್ದ
ಬೇರೊಡನೆ ಸಂಲಗ್ನವಾಗಿ
ಕಾಲಾಂತರದಲ್ಲಿ ಮತ್ತೆ
ಮೇಲೇರಿ ವಸಂತದಲಿ
ಮೊಳೆತು ಚಿಗುರಾಗಿ
ಬಲಿತ ಎಲೆಯಾಗಿ
ಮರದ ಕೊಂಬೆ ರೆಂಬೆಗಳಿಗಲಂಕಾರವಾಗಿ
ಅಡಿಯಲಿಹ ಪಾಂಥನಿಗೆ ನೆರಳ ಕೊಡೆಯಾಗಿ
ಬಾಲ್ಯ ಯೌವನ ಎನುವ ಹಂತಗಳಿಗೊಳಗಾಗಿ
ಅದಕೀಗ ಮತ್ತೆ
ಹೊಸಬದುಕು.

ಇವೆಲ್ಲಕ್ಕೆ ಸಾಕ್ಷಿಯಾಗಿ
ಕಾಯುತ್ತಿವೆ
ಅಲ್ಲಿ ಇನ್ನೂ ಉಳಿದ
ಎಲೆಗಳು ತಮ್ಮ
ಸರದಿಗಾಗಿ.

ಮರ ಮಾತ್ರ ನಿರ್ಲಿಪ್ತ
ನಿಂತೆ ಇದೆ
ಧ್ಯಾನಸ್ಥ ಸಂತನ ಹಾಗೆ
ಈ ಎಲ್ಲ
ಚಿಗುರು,ಎಲೆ,ಹೂವು,ಹಣ್ಣು,ಬೀಜಗಳ
ಚಕ್ರ ಚಲನೆಯ ಬೆರಗಿನಲ್ಲಿ.

